ಶ್ರೀ ಎಸ್. ಬಂಗಾರಪ್ಪ.—ಚಂದ್ರೇಗೌಡರೇ, ನಿಮಗೆ ಏನೂ ಅನುಮಾನ ಬೇಕಾಗಿಲ್ಲ. ಒಂದು ವಿಚಾರ ಆಗಲೇ ಹೇಳಿದ್ದೇನೆ. ಹಾಗೇನಾದರೂ ಇಂತಹ ಸಂದರ್ಭ ಬಂದರೆ ಮಾತ್ರ ನಾವು ಇದನ್ನು ಉಪಯೋಗ ಮಾಡುತ್ತೇವೆ, ಇಲ್ಲದೇ ದೊಡದರೆ ತಾವು ಉಪಯೋಗ ಮಾಡುವುದಿಲ್ಲ ಎನ್ನುವ ವಿಷಯನ್ನು ಆಗಲೂ ಹೇಳಿದ್ದೇನೆ, ಈಗಲೂ ಹೇಳುತ್ತಿದ್ದೇನೆ.

ಶ್ರೀ ಡಿ. ಬಿ. ಚಂದ್ರೇಗೌಡ.—ಶಾಂತಿ ಇದೆ ಸಮಾಧಾನ ಇದೆ ಎಂದು ನೀವೇ ಒಪ್ಪಿಕೊಳ್ಳುತ್ತೀರಿ. Why do you want to equip yourselves with this Act? Please explain.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ನಾನು ಹೇಳುತ್ತಿದ್ದೇನೆ ಸಂದರ್ಭಕ್ಕೆ ತಕ್ಕಹಾಗೆ ಇದನ್ನು ಉಪಯೋಗ ಮಾಡಿಕೊಳ್ಳುತ್ತೇವೆಂದು ಹೇಳಿದ್ದೇನೆ. ಈಗಲೂ ಕೂಡಾ ನಾನು ಅದಕ್ಕೆ ಸ್ಟಿಕ್ ಆನ್ ಆಗುತ್ತೇನೆ ೧೯೮೬-೮೮ರಲ್ಲಿ ನೀವೇ ಬೇಡ ಎಂದು ಇದನ್ನು ಬಿಟ್ಟುಬಿಡಬಹುದಾಗಿತ್ತು. ಅದನ್ನು ಮಾಡಲಿಲ್ಲ. ನೀವು ಇನೊವೊಕ್ ಮಾಡಿದ್ದೀರಿ, ಇಡೀ ಕರ್ನಾಟಕ ರಾಜ್ಯದಲ್ಲಿ ಜಾರಿಗೆ ಕೊಟ್ಟಿದ್ದೀರಿ.....

ಶ್ರೀ ಡಿ. ಬಿ. ಚಂದ್ರೇಗೌಡ.—ಯಾರನ್ನು ಕೇಳುತ್ತಿದ್ದೀರಿ ? ಅದು ನನ್ನ ಜವಾಬ್ದಾರಿನೇ ? I am not responsible what happened in the previous Government.....

(Interruption)

SRI S. BANGARAPPA.—You can not stick on that. ಆಗ ಕರ್ನಾಟಕದಲ್ಲಿ ಟೆರರಿಸ್ಟ್ಸ್ ಮಾತ್ರೊಬ್ಬರು ಇಲ್ಲ ಎಂಬ ಯೋಚನೆ ನಿಮಗೆ ಬರಲಿಲ್ಲವೇ ?

ಶ್ರೀ ಡಿ. ಬಿ. ಚಂದ್ರೇಗೌಡ.—ಅದು ನನ್ನ ಜವಾಬ್ದಾರಿನೇ ?

SRI D. B CHANDRE GOWDA.—I am not responsible. ಈ ಆಕ್ಟ್‌ನ್ನು ನಮ್ಮ ಕರ್ನಾಟಕ ರಾಜ್ಯದಲ್ಲಿ ಜಾರಿಗೆ ತರುವ ಅವಶ್ಯಕತೆ ಇಲ್ಲ. This is not the way. I cannot accept this position. I am sorry, I am not convinced. But there is no reason for invoking this particular section and I oppose this and stage a walk out.

SRI S. BANGARAPPA.—TADA is your own creation in Karnataka.

SRI M. VEERAPPA MOILY.—You are the father of TADA in Karnataka State,

(At this stage the Hon'ble Leader of the Opposition and Janata Dal Members staged a walk out.)

ಶ್ರೀ ಪಿ. ಬೈರೇಗೌಡ.—ಸ್ವಾಮಿ, ಮಾನ್ಯ ಮುಖ್ಯಮಂತ್ರಿಗಳಲ್ಲಿ, ನಾನು ಭಾಷಣ ಮಾಡುವಾಗಲೇ ಸರ್ಕಾರದಲ್ಲಿ ವಿನಂತಿ ಮಾಡಿದ್ದೆ. ಇವತ್ತು ಸಾಮಾನ್ಯ ಜನರೆಲ್ಲೂ ಅನುಮಾನ ಇದೆ. ಇದಕ್ಕೆಲ್ಲಾ ಯಾರು ಕಾರಣರೆಂದು ಜನಕ್ಕೆ ಗೊತ್ತಾಗಬೇಕು. ಈಗಾಗಲೇ ಇದರ ಬಗ್ಗೆ ಬಹಳ ದೂರುಗಳು ಬಂದಿವೆ. ಆದ್ದರಿಂದ ಒಂದು ಸದನದ ಸಮಿತಿ ಮಾಡಿ ವಿಷಯವನ್ನು ತನಿಖೆ ಮಾಡಬೇಕೆಂದು ಹೇಳಿದ್ದೆವು. ಆದರೆ ಸರ್ಕಾರ ಆದರ ಕಡೆ ಗಮನ ಕೊಡದೇ ಇರುವುದರಿಂದ ನಾವು ಸರ್ಕಾರದ ಧೋರಣೆಯನ್ನು ಪ್ರತಿಭಟಿಸಿ ಸೂಚಿಸಿದ್ದೇವೆ.

(ಜನತಾ ಪಕ್ಷದ ಸದಸ್ಯರಾದ ಶ್ರೀ ಪಿ. ಬೈರೇಗೌಡರು ಮತ್ತು ಶ್ರೀ ನಂಜೇಶ್ವರಪ್ಪ ಸಭೆಯಿಂದ ನಿರ್ಗಮಿಸಿದರು)

ಶ್ರೀ ಎ. ರುಕ್ಮಯ್ಯ ಪೂಜಾರಿ.—ಮಾನ್ಯ ಅಧ್ಯಕ್ಷರೇ, ಈ ಸದನದಲ್ಲಿ ನಾನ್ಯ ಮುಖ್ಯಮಂತ್ರಿಗಳು ಹಾಗೂ ಸನ್ಮಾನ್ಯ ಮಂತ್ರಿಗಳಾದ ಬಸವಲಿಂಗಪ್ಪನವರು ಈ ಕೋಮುಗಲಭೆಗೆ ಬಿ.ಜೆ.ಪಿ. ಯವರು, ಆರ್.ಎಸ್.ಎಸ್.ನವರು ಮತ್ತು ವಿಶ್ವ ಹಿಂದೂಪರಿಷತ್‌ನವರು ಕಾರಣರೆಂದು ನೇರ ಆರೋಪ ಮಾಡಿದ್ದಾರೆ. ಅದರ ಬಗ್ಗೆ ಸತ್ಯಸಂಗತಿ ಹೊರಬರಬೇಕಾದರೆ ಒಂದು ಸದನದ ಸಮಿತಿಯನ್ನು ಮಾಡಿ ತನಿಖೆ ಮಾಡಿಸಬೇಕೆಂದು ನಾವು ಸರ್ಕಾರದವನ್ನು ಒತ್ತಾಯ ಮಾಡಿದರೂ ಕೂಡಾ